ಏನಾಗಬೇಕು?' ಎಂದು ಕೇಳಿದರು. ಅವರ ಧ್ವನಿಯಲ್ಲಿ ಮತ್ತು ಕಣ್ಣುಗಳಲ್ಲಿ ಸೌಮ್ಯತೆಯಿತ್ತು. ಆದರೂ ಅವರ ಮುಖದ ಮೇಲೆ ಮೊದಲ ಸಲದ ಬೆವರಹನಿಗಳು ಕರಗಿ ಎರಡನೆಯ ಸಲ ಮೂಡಿದವು.

ಅವರಲ್ಲಿ ಒಬ್ಬ, 'ಅಯ್ಯಾ, ನಾವೂ ಕೂಡ ಕಾವೇರಿಪಟ್ಟಣದಿಂದ ಬಂದಿರುವ ರಕ್ಕಸನ ಮಕ್ಕಳು. ಬರದಲ್ಲಿ ಅಸುನೀಗಿದವರೇ ನಮ್ಮ ಆಹಾರ. ಯುದ್ಧವೆಂದರೆ ನಮಗೆ ಹಬ್ಬದೂಟ. ಬರಿ ನಾವಷ್ಟೇ ಬಂದಿಲ್ಲ! ನಮ್ಮ ಬಳಗದೊಡನೆ ಕಾವೇರಿಪಟ್ಟಣದ ವರ್ತಕರೂ ಬಂದಿದ್ದಾರೆ. ಅಲ್ಲಿ ನೋಡಿ' ಎಂದು ಕೊನೆಯ ಸಾಲಿನಲ್ಲಿ ನಿಂತಿದ್ದವರತ್ತ ಕೈ ತೋರಿಸಿದ.

'ನಮ್ಮ ಬಳಿ ನಿಮಗೆಲ್ಲಾ ಏನು ಕೆಲಸ?'

'ಅಯ್ಯಾ, ತಾವು ಬರದಿಂದ ಬೇಯುತ್ತಿರುವ ಕಾಂಚೀಪುರಕ್ಕೆ ಮಣಿಮೇಕಲೆಯನ್ನು ಕಳುಹಿಸಿಕೊಡುತ್ತೀರೆಂದು ಕೇಳಿ ತಿಳಿಯಲ್ಪಟ್ಟೆವು. ಇದು ನಮಗೆ ಆಘಾತ ತಂದಿದೆ. ಈ ಕೆಲಸವನ್ನು ತಾವೂ ಕೂಡಲೇ ನಿಲ್ಲಿಸಬೇಕು ಎಂಬುದನ್ನು ತಮಗೆ ಹೇಳಲು ಬಂದಿದ್ದೇವೆ'

'ಆಶ್ಚರ್ಯ! ಅದರಿಂದ ನಿಮಗಾಗುವ ತೊಂದರೆ ಏನು?'

'ಅಯ್ಯೋ ಕವಿಗಳೇ, ಅಪರೂಪಕ್ಕೆ ಕಾಂಚೀಪುರಕ್ಕೆ ಬರ ಬಂದಿದೆ. ಇಂತಹ ಬರದಲ್ಲಿ ಸತ್ತವರೇ ನಮಗೆ ಆಹಾರ. ಅದನ್ನು ಬಿಟ್ಟರೆ ನಾವೆಲ್ಲಾ ಉಪವಾಸದಿಂದ ಸಾಯಬೇಕಾಗುತ್ತದೆ. ಮಣಿಮೇಕಲೆಯನ್ನು ನಮ್ಮ ಪಟ್ಟಣಕ್ಕೆ ಕಳುಹಿಸಬೇಡಿ. ನಮ್ಮ ಆಹಾರಕ್ಕೆ ಕುತ್ತು ತರಬೇಡಿ' ಎಂದು ಅಲ್ಲಿದ್ದ ಒಂದು ಆಕಾರ ಹೇಳಿತು.

ಮತ್ತೊಂದು ಧ್ವನಿ 'ಇದು ನಮ್ಮ ಮನವಿ ಮಾತ್ರವಲ್ಲ! ಆ ಪಟ್ಟಣದ ಕೆಲವು ವರ್ತಕರ ಮಾತೂ ಇದೇ ಆಗಿದೆ! ಬೇಕಾದರೆ ಅವರನ್ನೇ ಕೇಳಿ ನೋಡಿ' ಎಂದು ಹೇಳಿತು.

ಶಾತ್ತನಾರ್ ಆ ಕಡೆ ತಿರುಗಿದಾಗ ಕೆಲವು ವರ್ತಕರು ಒಬ್ಬೊರಿಗೊಬ್ಬರು ತಾಕಿಕೊಂಡು ಮುಖ ಮರೆಸಿಕೊಂಡು ನಿಂತಿದ್ದರು. 'ನೀವು ಆ ಪಟ್ಟಣದ ವರ್ತಕರು. ನೀವೇಕೆ ಇವರೊಡನೆ ಬಂದಿರಿ? ಇದರಿಂದ ನಿಮಗೇನು ಲಾಭ?'

ವರ್ತಕರಲ್ಲೊಬ್ಬ ಮುಖ ಮುಂದುಮಾಡಿ 'ಅಯ್ಯಾ, ತಾವು ಎಲ್ಲವನ್ನೂ ತಿಳಿದವರು. ಜ್ಞಾನಿಗಳು. ನಿಮಗೆ ತಿಳಿದಿಲ್ಲದ್ದು ಏನಿದೆ! ಈ ಬರದಲ್ಲಿ ನಮಗೂ ಅಲ್ಪಸ್ವಲ್ಪ ಲಾಭವುಂಟು! ಏನೋ ಒಂದಕ್ಕೆ ಎರಡರಷ್ಟು ಬೆಲೆಯಲ್ಲಿ ಮಾರಿ, ಒಂದಿಷ್ಟು ಲಾಭ ಮಾಡಿಕೊಳ್ಳುತ್ತೇವೆ. ನಾಳೆಗಾಗಿ, ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳಿಗಾಗಿ ಕೂಡಿಟ್ಟುಕೊಳ್ಳಬೇಕಲ್ಲ! ಇಂತಹ ಅವಕಾಶ ನಮಗೆ ದೊರೆಯುವುದಿಲ್ಲ! ಇದನ್ನು ಬಿಟ್ಟರೆ ನಮಗೆ ಯಾವ ಆಶೆಯೂ ಇಲ್ಲ' ಎಂದು ಹೇಳಿದ.

ಮತ್ತೊಬ್ಬ ವರ್ತಕ 'ಅಯ್ಯಾ, ನೀವು ಮಣಿಮೇಕಲೆಯನ್ನು ನಮ್ಮ ಪಟ್ಟಣಕ್ಕೆ ಕಳುಹಿಸಿದರೆ, ಜನಗಳ ಅನ್ನದ ಬರವೆಲ್ಲಾ ತೀರಿಹೋಗುತ್ತದೆ. ಅದರಿಂದ ನಮ್ಮ ವ್ಯಾಪಾರವೆಲ್ಲಾ ಬಿದ್ದುಹೋಗುತ್ತದೆ. ನಮಗೆ ನಷ್ಟವಾಗುತ್ತದೆ. ಆದ್ದರಿಂದ ದೊಡ್ಡಮನಸ್ಸು ಮಾಡಿ. ಅವಳನ್ನು ನಮ್ಮಲ್ಲಿಗೆ ಕಳುಹಿಸಬೇಡಿ!'

ಶಾತ್ತನಾರ್ ಅವರಿಗೆ ಇವರೆಲ್ಲಾ ಯಾರೆಂದು ತಿಳಿಯಿತು. 'ಸ್ವಲ್ಪ ಕಿವಿಗೊಟ್ಟು ಕೇಳಿ. ಅನ್ನಧರ್ಮದ ಮುಂದೆ ಇನ್ನಾವ ಧರ್ಮವೂ ಇಲ್ಲ. ಆದ್ದರಿಂದ ಅನ್ನವೇ ಜೀವನ. ಮಣಿಮೇಕಲೆ ಹುಟ್ಟಿರುವುದೇ ದೀನ ದರಿದ್ರರಿಗೆ ಅನ್ನ ನೀಡಲು. ಅದನ್ನು ನೀವು ತಡೆಯಲಾರಿರಿ' ಎಂದು ಹೇಳಿದರು. ಅವರ ಮಾತುಗಳಲ್ಲಿ ನಿರ್ಧಾರವಿತ್ತು.

ಶಾತ್ತನಾರ್ ಮುಂದುವರಿಸಿ, 'ಮಣಿಮೇಕಲೆಯ ಈ ಪ್ರಯತ್ನವು ಕೇವಲ ಒಬ್ಬರ ಅಥವಾ ಒಂದು ಕುಟುಂಬದ ಅಥವಾ ಒಂದು ಜಾತಿಯ ಹಿತಕ್ಕಾಗಿ ಅಲ್ಲ! ಅವಳ ಅನ್ನನೀಡುವ ಕಾಯಕವು ಸರ್ವಜೀವಿಗಳ ಹಿತಕ್ಕಾಗಿ. ಸಕಲ ಜೀವರಾಶಿಗಳೂ ಬದುಕುಳಿಯಲು. ಆದ್ದರಿಂದ ಅವಳನ್ನು ನೀವು ಯಾರೂ ತಡೆಯಲಾರಿರಿ. ಅವಳದು ಮೇಘ ನ್ಯಾಯ. ಮಳೆಯ ಮೋಡಗಳು ಶ್ರೀಮಂತರ ಬಂಗಲೆಗಳು, ದೊರೆಗಳ ಅರಮನೆಗಳ ಮೇಲೆ ಮಳೆಸುರಿವಂತೆ, ಬಡವರ ಗುಡಿಸಲುಗಳ ಮೇಲೂ ಭೇದಭಾವವಿಲ್ಲದೆ ಮಳೆಸುರಿಸುತ್ತವೆ. ಮಣಿಮೇಕಲೆ ಮಾಡುತ್ತಿರುವುದೂ ಇದನ್ನೇ' ಎಂದು ಶಾಂತಚಿತ್ತದಿಂದ ಹೇಳಿದರು.

ವರ್ತಕರ ಕಡೆ ತಿರುಗಿದ ಶಾತ್ತನಾರ್, 'ಇಂತಹ ಸಂಕಟದ ದಿನಗಳಲ್ಲೂ ಜನರನ್ನು ಸುಲಿದು, ಅದರಿಂದ ಲಾಭ ಮಾಡಿಕೊಳ್ಳಬೇಡಿ. ಇದಕ್ಕಿಂತ ಘೋರ ಪಾಪ ಮತ್ತೊಂದಿಲ್ಲ! ಇಂತಹ ಹೊತ್ತಿನಲ್ಲಿ ಕರುಣೆ, ಮೈತ್ರಿ ಎಲ್ಲ ಧರ್ಮಕ್ಕಿಂತ ಮಿಗಿಲಾದುದೆಂದು ತಿಳಿಯಿರಿ. ತ್ಯಾಗ ಜೀವನವೇ ಸುಖಕ್ಕೆ ದಾರಿ ಎನ್ನುವುದನ್ನು ಮಣಿಮೇಕಲೆ